**ಸಾಕ್ಷಿಯನ್ನು ದಿನಾಂಕಃ 11-08-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಎಸ್ ಟಿ ಜಿ ವಕೀಲರಿಂದಃ**

ಈ ದಾವೆಗೆ ಪೂರಕವಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.–12 ರಿಂದ 14 | ಆಧಾರ ಕಾರ್ಡ್‌ಗಳು |
| ನಿ.ಪಿ.–15 ಮತ್ತು 16 | ಚುನಾವಣಾ ಗುರುತಿನ ಚೀಟಿಗಳು |
| ನಿ.ಪಿ.–17 | ಪಡಿತರ ಚೀಟಿ |
| ನಿ.ಪಿ.–18 | ಜನನ ಪ್ರಮಾಣ ಪತ್ರ |
| ನಿ.ಪಿ.–19 | ಫೋಟೋ |
| ನಿ.ಪಿ.–20 ಮತ್ತು 21 | ಜಾತಿ ಪ್ರಮಾಣ ಪತ್ರ |
| ನಿ.ಪಿ.–22 | ಎಸ್ ಸಿ. ನಂಃ 12/2019 ರಲ್ಲಿನ ದೋಷರೋಪಣಾ ಪಟ್ಟಿ ಹಾಗೂ ದಾಖಲಾತಿಗಳ ದೃಢೀಕೃತ ನಕಲುಗಳು |
| ನಿ.ಪಿ.–23 ರಿಂದ 34 | ಸಾಕ್ಷಿಗಳ ಹೇಳಿಕೆಗಳ ದೃಢೀಕೃತ ನಕಲುಗಳು |
| ನಿ.ಪಿ.–35 | ತೀರ್ಪಿನ ದೃಢೀಕೃತ ನಕಲುಗಳು |

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**